ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-01-1990.

# *ಪುರುಷಾರ್ಥದ ತೀವ್ರಗತಿಯ ಕೊರತೆಗೆ ಎರಡು ಮುಖ್ಯಕಾರಣಗಳು.*

(पुरुषार्थ की तीव्रगति में कमी के दो मुख्य कारण)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬ್ರಾಹ್ಮಣರ ಅನಾದಿ, ಆದಿ ರಚಯಿತ ಬಾಪ್‌ದಾದಾ ತಮ್ಮ ವಿಶೇಷ ಡೈರೆಕ್ಟ್ ಸಮೀಪ ರಚನೆ, ಶ್ರೇಷ್ಠ ರಚನೆಯಾದ ಬ್ರಾಹ್ಮಣ ಮಕ್ಕಳನ್ನು ನೋಡುತ್ತಿದ್ದಾರೆ. ಬಾಪ್‌ದಾದಾರವರ ಅತೀಪ್ರಿಯ ರಚನೆ ತಾವು ಬ್ರಾಹ್ಮಣ ಆತ್ಮರಾಗಿದ್ದೀರಿ. ಅವರು ಸಮೀಪ ಮತ್ತು ಸಮಾನರಾಗುವ ಲಕ್ಷ್ಯವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಂಡು ಮುಂದುವರೆಯುತ್ತಿದ್ದಾರೆ. ಇಂದು ಇಂತಹ ಆದಿರಚನೆಯನ್ನು ವಿಶೇಷ ರೂಪದಿಂದ ನೋಡುತ್ತಿದ್ದೆವು. ಸರ್ವತೀವ್ರ ಪುರುಷಾರ್ಥಿ ಹಾಗೂ ಪುರುಷಾರ್ಥಿ ಇಬ್ಬರ ಗತಿ ಮತ್ತು ವಿಧಿಯನ್ನು ನೋಡುತ್ತಿದ್ದರು. ಬಾಪ್‌ದಾದಾರವರ ಮೂಲಕ ಸಿಕ್ಕಿರುವ ಶ್ರೇಷ್ಠ ಸಹಜವಿಧಿಯ ಮೂಲಕ ಕೆಲವೊಮ್ಮೆ ತೀವ್ರಗತಿ. ಕೆಲವೊಮ್ಮೆ ತೀವ್ರ, ಕೆಲವೊಮ್ಮೆ ಕಡಿಮೆ ಗತಿ ಎರಡೂ ಪ್ರಕಾರದ ಬ್ರಾಹ್ಮಣ ಮಕ್ಕಳನ್ನು ನೋಡಿದೆವು. ವಿದ್ಯೆ, ಪಾಲನೆ ಮತ್ತು ಪ್ರಾಪ್ತಿ ಎಲ್ಲರಿಗೂ ಒಬ್ಬರ ಮೂಲಕ ಒಂದೇ ಪ್ರಕಾರವಾಗಿ ಸಿಗುತ್ತಿದೆ. ಅಂದಮೇಲೆ ಮತ್ತೆ ಗತಿಯಲ್ಲಿ ಅಂತರವೇಕೆ? ತೀವ್ರಪುರುಷಾರ್ಥಿ ಅರ್ಥಾತ್ ಫಸ್ಟ್ ಡಿವಿಜನ್‌ನಲ್ಲಿ ಬರುವವರು ಮತ್ತು ಪುರುಷಾರ್ಥಿ ಅರ್ಥಾತ್ ಸೆಕೆಂಡ್ ಡಿವಿಜನ್‌ನಲ್ಲಿ ತೇರ್ಗಡೆಯಾಗುವವರು. ಇಂದು ವಿಶೇಷವಾಗಿ ಎಲ್ಲರ ಚಾರ್ಟನ್ನು ಪರಿಶೀಲನೆ ಮಾಡಿದೆವು. ಕಾರಣಗಳಂತೂ ಬಹಳ ಇದೆ ಆದರೆ ವಿಶೇಷವಾಗಿ ಎರಡು ಕಾರಣಗಳಿವೆ. ಎಲ್ಲರ ಬಯಕೆ ಫಸ್ಟ್ ಡಿವಿಜನ್‌ನಲ್ಲಿ ಬರಬೇಕು ಎಂಬುದೇ ಆಗಿದೆ. ಸೆಕೆಂಡ್ ಡಿವಿಜನ್‌ನಲ್ಲಿ ಬರಲು ಯಾರೂ ಬಯಸುವುದಿಲ್ಲ ಆದರೆ ಲಕ್ಷ್ಯ ಮತ್ತು ಲಕ್ಷಣ ಇವೆರಡರಲ್ಲಿ ಅಂತರವಾಗಿಬಿಡುತ್ತದೆ. ವಿಶೇಷವಾಗಿ ಯಾವ ಎರಡು ಕಾರಣಗಳನ್ನು ನೋಡಿರಬಹುದು? ಮೊದಲನೆಯದು- ಸಂಕಲ್ಪಶಕ್ತಿ. ಇದು ಎಲ್ಲದಕ್ಕಿಂತ ಶ್ರೇಷ್ಠಶಕ್ತಿಯಾಗಿದೆ. ಅದನ್ನು ಯಥಾರ್ಥ ರೀತಿಯಿಂದ ಸ್ವಯಂನ ಪ್ರತಿ ಹಾಗೂ ಸೇವೆಯ ಪ್ರತಿ ಸಮಯ ಪ್ರಮಾಣ ಕಾರ್ಯದಲ್ಲಿ ತೊಡಗಿಸುವ ರೀತಿಯು ಯಥಾರ್ಥವಾಗಿಲ್ಲ. ಎರಡನೇ ಕಾರಣವಾಗಿದೆ- ವಾಣಿಯ ಶಕ್ತಿಯನ್ನು ಯಥಾರ್ಥ ರೀತಿ, ಸಮರ್ಥ ರೀತಿಯಿಂದ ಕಾರ್ಯದಲ್ಲಿ ತೊಡಗಿಸುವುದರ ಕೊರತೆ. ಇವೆರಡರಲ್ಲಿನ ಕೊರತೆಗೆ ಕಾರಣವಾಗಿದೆ- ಯೂಸ್ ನ (ಬಳಕೆ) ಬದಲು ಲೂಸ್ (ಸೋರಿಕೆ) ಆಗುತ್ತದೆ. ಶಬ್ದಗಳಲ್ಲಿ ಸ್ವಲ್ಪವೇ ಅಂತರವಿದೆ ಆದರೆ ಪರಿಣಾಮದಲ್ಲಿ ಬಹಳಷ್ಟು ಅಂತರವಾಗಿ ಬಿಡುತ್ತದೆ.

ಬಾಪ್‌ದಾದಾ ಪೂರ್ಣ ಫಲಿತಾಂಶವನ್ನು ನೋಡಲಿಲ್ಲ, ಕೇವಲ 3-4 ದಿನಗಳ ಫಲಿತಾಂಶವನ್ನು ನೋಡಿದೆವು. ಪ್ರತಿಯೊಬ್ಬರ 3-4 ದಿನಗಳ ಫಲಿತಾಂಶದಲ್ಲಿ ಏನು ನೋಡಿರಬಹುದು? 50% ಅರ್ಥಾತ್ ಅರ್ಧ-ಅರ್ಧ. ಸಂಕಲ್ಪ ಮತ್ತು ಮಾತಿನಲ್ಲಿ ಎರಡರಲ್ಲಿ ಶಕ್ತಿಗಳ ಜಮಾದ ಖಾತೆಯು ಶೇ.50ರಷ್ಟು ಆತ್ಮರ ಜಮಾದ ಖಾತೆ 40% ಇತ್ತು ಹಾಗೂ ವ್ಯರ್ಥ ಮತ್ತು ಸಾಧಾರಣತೆಯ ಖಾತೆಯು 60% ನೋಡಿದೆವು. ಅಂದಾಗ ಆಲೋಚಿಸಿ- ಜಮಾ ಎಷ್ಟಾಯಿತು? ಹೆಚ್ಚು ಭಾರವು ಯಾರದಾಯಿತು? ಅದರಲ್ಲಿಯೂ ವಾಚಾದ ಕಾರಣ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಮನಸ್ಸು ವಾಣಿಯನ್ನೂ ಸಹ ತನ್ನ ಕಡೆ ಸೆಳೆಯುತ್ತದೆ. ಇಂದು ಬಾಪ್‌ದಾದಾ ವಾಣಿ ಅರ್ಥಾತ್ ಮಾತಿನ ಕಡೆ ವಿಶೇಷ ಗಮನ ತರಿಸುತ್ತಿದ್ದೇವೆ ಏಕೆಂದರೆ ಮಾತಿನ ಸಂಬಂಧ ತನ್ನ ಜೊತೆಯೂ ಇದೆ ಮತ್ತು ಸರ್ವರ ಜೊತೆಯೂ ಇರುತ್ತದೆ. ಮತ್ತೇನು ನೋಡಿದೆವು? ಮನಸ್ಸಿನ ಮೂಲಕ ನೆನಪಿನಲ್ಲಿರಬೇಕಾಗಿದೆ. ಅದಕ್ಕಾಗಿಯೂ ಮಧ್ಯ-ಮಧ್ಯದಲ್ಲಿ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತಾರೆ ಆದರೆ ಮಾತಿನ ಬದಲಾಗಿ ಅಜಾಗರೂಕತೆ ಹೆಚ್ಚಾಗಿದೆ. ಆದ್ದರಿಂದ ಬಾಪ್‌ದಾದಾ ಇದರ ಮೇಲೆ ವಿಶೇಷ ಅಂಡರ್‌ಲೈನ್ ಮಾಡಿಸುತ್ತಿದ್ದಾರೆ. ಎರಡು ವರ್ಷಗಳ ಮೊದಲು ಬಾಪ್‌ದಾದಾ ವಿಶೇಷವಾಗಿ ಪುರುಷಾರ್ಥದಲ್ಲಿ, ಸೇವೆಯಲ್ಲಿ ಮುಂದುವರೆಯುವಂತಹ ಮಹಾರಥಿ ಆತ್ಮರಿಗೆ ಹಾಗೂ ಉಳಿದ ಎಲ್ಲರಿಗೂ ವಾಣಿಗಾಗಿ ಮೂರು ವಿಷಯಗಳನ್ನು ತಿಳಿಸಿದ್ದೆವು. **ಕಡಿಮೆ ಮಾತನಾಡಿ, ನಿಧಾನವಾಗಿ ಮಾತನಾಡಿ ಮತ್ತು ಮಧುರವಾಗಿ ಮಾತನಾಡಿ**. ವ್ಯರ್ಥ ಮಾತನಾಡುವವರ ಲಕ್ಷಣ- ಅವರು ಬಹಳ ಮಾತನಾಡುತ್ತಾರೆ. ಸಂಘಟನೆಯ ಪ್ರಮಾಣವಾಗಿ ಕಷ್ಟವಾಗಿ ತಮ್ಮನ್ನು ತಾವು ನಿಯಂತ್ರಣ ಮಾಡಿಕೊಳ್ಳುತ್ತಾರೆ. ಆದರೆ ಶಾಂತಿಯಿಂದ ಇರಲು ಒಳಗೊಳಗೆ ಯಾರೋ ಅವರನ್ನು ಬಂಧಿಸಿದ ಹಾಗೆ ಅನುಭವ ಮಾಡಿಕೊಳ್ಳುತ್ತಾರೆ. ವ್ಯರ್ಥ ಮಾತು ಯಾವ ಅತಿದೊಡ್ಡ ನಷ್ಟವನ್ನುಂಟು ಮಾಡುತ್ತದೆ? ಒಂದನೆಯದಾಗಿ ಶಾರೀರಿಕ ಶಕ್ತಿಯು ಸಮಾಪ್ತಿಯಾಗುತ್ತದೆ ಏಕೆಂದರೆ ಖರ್ಚಾಗುತ್ತದೆ ಮತ್ತು ಎರಡನೆಯದಾಗಿ ಸಮಯವು ವ್ಯರ್ಥವಾಗಿ ಹೋಗುತ್ತದೆ. ವ್ಯರ್ಥವಾಗಿ ಮಾತನಾಡುವವರಿಗೆ ಯಾವ ಅಭ್ಯಾಸ ಇರುತ್ತದೆ? ಚಿಕ್ಕಮಾತನ್ನು ಬಹಳ ಉದ್ದಗಲವಾಗಿ ಮಾತನಾಡುವರು ಮತ್ತು ಮಾತನಾಡುವ ರೀತಿಯು ಕಥೆಯ ತರಹ ಇರುವುದು. ಹೇಗೆ ರಾಮಾಯಣ, ಮಹಾಭಾರತದ ಕಥೆಯನ್ನು ಬಹಳ ಆಸಕ್ತಿಯಿಂದ ಕೇಳುತ್ತಾರಲ್ಲವೆ. ಸ್ವಯಂ ರುಚಿಯಿಂದ ಹೇಳುತ್ತಾರೆ. ಅನ್ಯರಿಗೂ ಹೇಳುವ ರುಚಿಯನ್ನು ತರಿಸುತ್ತಾರೆ ಆದರೆ ಫಲಿತಾಂಶವೇನಾಗುತ್ತದೆ? ರಾಮಾಯಣ- ಮಹಾಭಾರತದ ಫಲಿತಾಂಶವೇನಾಗಿದೆ? ರಾಮನು ವನವಾಸಕ್ಕೆ ಹೋದನು, ಕೌರವರು ಮತ್ತು ಪಾಂಡವರ ಯುದ್ಧವಾಯಿತು. ಕಥೆಯಂತೆ ತೋರಿಸುತ್ತಾರೆ ಆದರೆ ಸಾರವೇನೂ ಇಲ್ಲ. ಸಂಗೀತವು ಬಹಳ ರಮಣೀಕವಾಗಿರುತ್ತದೆ. ಇದಕ್ಕೆ ಕಥೆಯೆಂದು ಹೇಳುತ್ತಾರೆ. ವ್ಯರ್ಥವಾಗಿ ಮಾತನಾಡುವವರು ಮಾಯೆಯ ಪ್ರಭಾವದ ಕಾರಣ ಅವರು ನಿರ್ಬಲ ಆತ್ಮರಾಗಿದ್ದಾರೆ. ಅವರಿಗೆ ಕೇಳುವ ಮತ್ತು ಹೇಳುವ ಜೊತೆಗಾರರು ಬಹಳ ಬೇಗ ತಯಾರಾಗುತ್ತಾರೆ. ಇಂತಹ ಅತ್ಮನು ಏಕಾಂತಪ್ರಿಯ ಆಗಿರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರು ಜೊತೆಗಾರರನ್ನು ತಯಾರು ಮಾಡಿಕೊಳ್ಳುವುದರಲ್ಲಿ ಬಹಳ ಬುದ್ಧಿವಂತರಾಗಿರುತ್ತಾರೆ. ಹೊರಗಿನಿಂದ ಕೆಲಕೆಲವೊಮ್ಮೆ ಇವರ ಸಂಘಟನೆಯು ಬಹಳ ಶಕ್ತಿಶಾಲಿ ಮತ್ತು ದೊಡ್ಡದಾಗಿದೆ ಎಂಬಂತೆ ಕಾಣುತ್ತದೆ ಆದರೆ ಒಂದು ಮಾತಂತೂ ಸದಾಕಾಲಕ್ಕಾಗಿ ನೆನಪಿಟ್ಟುಕೊಳ್ಳಿ- "ಮಾಯೆಯು ಬಿಟ್ಟುಹೋಗುವ ಅಂತಿಮ ಚರಣವಾಗಿದೆ ಆದ್ದರಿಂದ ಬೀಳ್ಕೊಡುಗೆಯನ್ನು ತೆಗೆದುಕೊಳ್ಳುತ್ತಾ- ತೆಗೆದುಕೊಳ್ಳುತ್ತಾ ಕೆಲವೊಮ್ಮೆ ತನ್ನ ಬಾಣವನ್ನು ಬಿಡುತ್ತಾ ಇರುತ್ತದೆ" ಆದ್ದರಿಂದ ಕೆಲಕೆಲವೊಮ್ಮೆ ಕೆಲವೊಂದೆಡೆ ಮಾಯೆಯ ಪ್ರಭಾವವು ತನ್ನ ಕೆಲಸ ಮಾಡಿಬಿಡುತ್ತದೆ ಅದು ಆರಾಮದಿಂದ ಹೋಗುವಂತಹದ್ದಲ್ಲ. ಕೊನೆ ಘಳಿಗೆಯವರೆಗೂ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಕಹಿಯಾದ ರೂಪದಲ್ಲಿ ಇಲ್ಲವೆ ಬಹಳ ಮಧುರ ರೂಪದಲ್ಲಿ ಮತ್ತು ಹೊಸ-ಹೊಸ ರೂಪಗಳನ್ನು ಧಾರಣೆ ಮಾಡಿಕೊಂಡು ಬ್ರಾಹ್ಮಣರ ಮೇಲೆ ಪ್ರಯೋಗ ನಡೆಸುತ್ತಾ ಇರುತ್ತದೆ. ಇದರಿಂದ ಮುಗ್ಧಬ್ರಾಹ್ಮಣರು ಕೆಲವೊಮ್ಮೆ ಏನು ಕೇಳುತ್ತಾರೆ? ಅರೆ! ಬಾಪ್‌ದಾದಾ ಈ ರೂಪದಲ್ಲಿಯೂ ಮಾಯೆ ಬರುತ್ತದೆ ಎಂಬುದನ್ನು ತಿಳಿಸಿರಲೇ ಇಲ್ಲ! ಹುಡುಗಾಟಿಕೆಯ ಕಾರಣ ತಮ್ಮನ್ನು ಪರಿಶೀಲನೆಯೂ ಮಾಡಿಕೊಳ್ಳುವುದಿಲ್ಲ ಮತ್ತು ಇದನ್ನೇ ಯೋಚಿಸುತ್ತಾರೆ- ಬಾಪ್‌ದಾದಾರವರಂತೂ ಮಾಯೆ ಬರುವುದು. ಎಂದು

ಹೇಳುತ್ತಾರೆ. ಇದರ ಅರ್ಥಪದವನ್ನು ನೆನಪಿಟ್ಟುಕೊಳ್ಳುತ್ತಾರೆ- ಮಾಯೆ ಬರುವುದು ಎಂದು. ಆದರೆ ಮಾಯಾಜೀತರಾಗಬೇಕು ಎಂಬುದನ್ನು ಮರೆತುಹೋಗುತ್ತಾರೆ.

ಇನ್ನೊಂದು ಮಾತು- ವ್ಯರ್ಥ ಹಾಗೂ ಸಾಧಾರಣ ಮಾತಿನ ಭಿನ್ನ-ಭಿನ್ನ ರೂಪಗಳನ್ನು ನೋಡಿದೆವು. 1.ಒಂದನೆಯದು - ಎಲ್ಲೆಯಿಂದ ಹೊರಗೆ ಅರ್ಥಾತ್ ಮಿತಿಗಿಂತಲೂ ಆಚೆ ತಮಾಷೆಯ ಮಾತನಾಡುವುದು 2. ಎರಡನೆಯದು ನಾದದ ರೀತಿಯಲ್ಲಿ (ಉನ್ನತ ಶಬ್ದಗಳನ್ನು ಬಳಸುವ, ಸ್ವಚ್ಛವಾದ ಭಾಷೆ) ಮಾತನಾಡುವುದು. 3. ಮೂರನೆಯದು ಅಲ್ಲಿ-ಇಲ್ಲಿಯ ಸಮಾಚಾರಗಳನ್ನು ಒಟ್ಟುಗೂಡಿಸಿ ಕೇಳುವುದು-ಹೇಳುವುದು. 4. ನಾಲ್ಕನೆಯದು- ಸ್ವಲ್ಪ ಸೇವಾ ಸಮಾಚಾರ ಮತ್ತು ಸೇವಾ ಸಮಾಚಾರಗಳ ಜೊತೆ ಸೇವಾಧಾರಿಗಳ ಬಲಹೀನತೆಗಳ ಚಿಂತನೆ- ಈ ಮಿಕ್ಸ್ ಚಟ್ನಿ ಮತ್ತು 5. ಐದನೆಯದು- ಅಯುಕ್ತಿಯುಕ್ತ ಮಾತು, ಅರ್ಥಾಥ್ ಬ್ರಾಹ್ಮಣರ ಡಿಕ್ಷನರಿಯಲ್ಲಿ ಇರಲೇ ಬಾರದಂತಹ ಮಾತುಗಳು. ಆದರೆ ಈ ಐದು ರೂಪರೇಖೆಗಳನ್ನು ನೋಡಿದೆವು. ಈ ಐದನ್ನು ಬಾಪ್‌ದಾದಾ ವ್ಯರ್ಥ ಮಾತಿನ ಪಟ್ಟಿಯಲ್ಲಿಯೇ ಎಣಿಕೆ ಮಾಡುತ್ತಾರೆ. ತಮಾಷೆ ಮಾಡುವುದು ಒಳ್ಳೆಯದೇ ಎಂದು ತಿಳಿದುಕೊಳ್ಳಬೇಡಿ. ಯಾವ ಯಾವ ತಮಾಷೆಯಲ್ಲಿ ಆತ್ಮೀಯತೆ ಇರುವುದೋ ಅದು ಒಳ್ಳೆಯದಾಗಿದೆ ಮತ್ತು ಯಾರೊಂದಿಗೆ ತಮಾಷೆ ಮಾಡುತ್ತೀರೋ ಆ ಆತ್ಮಕ್ಕೆ ಲಾಭವಾಯಿತೇ, ಸಮಯವು ಸಫಲವಾಯಿತೇ ಅಥವಾ ವ್ಯರ್ಥವಾಗಿ ಕಳೆಯಿತೇ? ರಮಣೀಕತೆಯ ಗುಣವು ಒಳ್ಳೆಯದೇ ಆಗಿದೆ ಎಂದು ಹೇಳಲಾಗುತ್ತದೆ ಆದರೆ ವ್ಯಕ್ತಿ, ಸಮಯ. ಸಂಘಟನೆ, ಸ್ಥಾನ, ವಾಯುಮಂಡಲದ ಪ್ರಮಾಣ ರಮಣೀಕತೆ ಮಾಡಿದರೆ ಅದು ಇಷ್ಟವಾಗುತ್ತದೆ. ಒಂದುವೇಳೆ ಇವೆಲ್ಲಾ ಮಾತುಗಳಲ್ಲಿ ಒಂದು ಮಾತು ಸರಿಯಿಲ್ಲದಿದ್ದರೂ ಸಹ ರಮಣೀಕತೆಯು ವ್ಯರ್ಥ ಸಾಲಿನಲ್ಲಿ ಎಣಿಕೆಯಾಗುವುದು ಮತ್ತು ಅವರಿಗೆ ಯಾವ ಸರ್ಟಿಫಿಕೇಟ್ ಸಿಗುತ್ತದೆ- ಇವರು ಬಹಳ ಚೆನ್ನಾಗಿ ನಗಿಸುತ್ತಾರೆ ಆದರೆ ಹೆಚ್ಚು ಮಾತನಾಡುತ್ತಾರೆ ಅಂದಮೇಲೆ ಇದು ಮಿಕ್ಸ್ ಚಟ್ನಿ ಆಗಿಬಿಟ್ಟಿತಲ್ಲವೆ? ಆದ್ದರಿಂದ ಸಮಯದ ಮಿತಿಯನ್ನಿಟ್ಟುಕೊಳ್ಳಿ. ಇದಕ್ಕೆ ಮರ್ಯಾದಾ ಪುರುಷೋತ್ತಮ ಎಂದು ಹೇಳಲಾಗುತ್ತದೆ. ನನ್ನ ಸ್ವಭಾವವೇ ಹೀಗಿದೆ ಎಂದು ಹೇಳುತ್ತಾರೆ, ಇದು ಎಂತಹ ಸ್ವಭಾವವಾಗಿದೆ? ಬಾಪ್‌ದಾದಾರವರ ಸ್ವಭಾವವೇ? ಇಂತಹವರಿಗೂ ಮರ್ಯಾದಾ ಪುರುಷೋತ್ತಮರೆಂದು ಹೇಳುವುದಿಲ್ಲ. ಸಾಧಾರಣ ಪುರುಷರೆಂದೇ ಹೇಳಬಹುದು ಆದ್ದರಿಂದ ನಿಮ್ಮ ಮಾತು ಸದಾ ಕೇಳುವವರು ಚಾತ್ರಕರಾಗುವಂತಿರಲಿ - ಇವರು ಏನಾದರೂ ಮಾತನಾಡಲಿ, ನಾವು ಕೇಳೋಣ ಎನ್ನುವಂತಿರಲಿ. ಇದಕ್ಕೆ ಅಮೂಲ್ಯ ಮಹಾವಾಕ್ಯಗಳೆಂದು ಹೇಳಲಾಗುತ್ತದೆ. ಮಹಾವಾಕ್ಯಗಳು ಬಹಳ ಉದ್ದಗಲವಾಗಿ ಇರುವುದಿಲ್ಲ. ಯಾವಾಗ ಬೇಕೋ ಆಗ ಮಾತನಾಡುತ್ತಿದ್ದರೆ ಅದಕ್ಕೆ ಮಹಾವಾಕ್ಯವೆಂದು ಹೇಳುವುದಿಲ್ಲ ಆದ್ದರಿಂದ ಸದ್ಗುರುವಿನ ಮಕ್ಕಳು ಮಾಸ್ಟರ್ ಸದ್ಗುರುವಿನ ಮಾತುಗಳು ಮಹಾವಾಕ್ಯ ಆಗಿರುತ್ತದೆಯೇ ಹೊರತು ವಾಕ್ಯವಾಗಿರುವುದಿಲ್ಲ. ವ್ಯರ್ಥವಾಗಿ ಮಾತನಾಡುವವರು ತಮ್ಮ ಬುದ್ಧಿಯಲ್ಲಿ ವ್ಯರ್ಥ ಮಾತುಗಳು, ವ್ಯರ್ಥ ಸಮಾಚಾರ, ನಾಲ್ಕಾರು ಕಡೆಯ ಕಸವನ್ನು ಒಟ್ಟುಗೂಡಿಸಿಕೊಳ್ಳುವರು ಏಕೆಂದರೆ ಅವರು ಅದಕ್ಕೆ ಕಥೆಯ ರಮಣೀಕರೂಪ ಕೊಡಬೇಕಾಗುತ್ತದೆ. ಹೇಗೆ ಶಾಸ್ತ್ರವಾದಿಗಳ ಬುದ್ಧಿಯಿದೆಯಲ್ಲವೆ, ಆದ್ದರಿಂದ ಯಾವ ಸಮಯ ಮತ್ತು ಯಾವ ಸ್ಥಾನದಲ್ಲಿ, ಯಾವ ಮಾತು ಅವಶ್ಯಕವೆನಿಸುವುದೋ, ಯುಕ್ತಿಯುಕ್ತ ಆಗಿರುವುದೋ ಸ್ವಯಂನ ಮತ್ತು ಅನ್ಯಆತ್ಮರಿಗೆ ಲಾಭದಾಯಕವಾಗಿರುವುದೋ ಅದೇ ಮಾತುಗಳನ್ನು ಮಾತನಾಡಿರಿ. ಮಾತಿನ ಮೇಲೆ ಗಮನ ಕಡಿಮೆಯಿದೆ ಆದ್ದರಿಂದ ಇದರ ಮೇಲೆ ಡಬಲ್ ಅಂಡರ್‌ಲೈನ್ ಮಾಡಿಕೊಳ್ಳಿ.

ವಿಶೇಷವಾಗಿ ಈ ವರ್ಷ ಮಾತಿನ ಮೇಲೆ ಗಮನವನ್ನಿಡಿ. ಪರಿಶೀಲನೆ ಮಾಡಿಕೊಳ್ಳಿ ಮಾತಿನ ಮೂಲಕ ಶಕ್ತಿ ಮತ್ತು ಸಮಯವನ್ನು ಎಷ್ಟು ಜಮಾ ಮಾಡಿಕೊಂಡೆವು ಮತ್ತು ಎಷ್ಟು ವ್ಯರ್ಥವಾಗಿ ಹೋಯಿತು? ಯಾವಾಗ ಇದನ್ನು ಪರಿಶೀಲನೆ ಮಾಡಿಕೊಳ್ಳುತ್ತೀರೋ ಆಗ ಸ್ವತಹವಾಗಿ ಅಂತರ್ಮುಖತೆಯ ರಸದ ಅನುಭವ ಮಾಡಬಲ್ಲಿರಿ. ಅಂತರ್ಮುಖತೆಯ ರಸ ಮತ್ತು ಮಾತಿನ ರಸ ಇದರಲ್ಲಿ ರಾತ್ರಿ-ಹಗಲಿನ ಅಂತರವಿದೆ. ಅಂತರ್ಮುಖಿಯು ಸದಾ ಸದಾ ಭೃಕುಟಿಯ ಕುಟೀರದಲ್ಲಿ ತಪಸ್ವೀಮೂರ್ತಿಯ ಅನುಭವ ಮಾಡುತ್ತಾನೆ. ತಿಳಿಯಿತೆ!

ತಿಳಿದುಕೊಳ್ಳುವುದು ಅರ್ಥಾತ್ ತಯಾರಾಗುವುದು. ಯಾವುದೇ ಮಾತು ಅರ್ಥವಾಗಿಬಿಟ್ಟರೆ ಅವರು ಖಂಡಿತ ಮಾಡುತ್ತಾರೆ ಮತ್ತು ತಿಳಿದುಕೊಳ್ಳುತ್ತಾರೆ. ನಿಮಿತ್ತ ಶಿಕ್ಷಕಿಯರಂತೂ ಬುದ್ಧಿವಂತರಾಗಿಯೇ ಇದ್ದೀರಿ ಆದ್ದರಿಂದಲೇ ಭಾಗ್ಯ ಸಿಕ್ಕಿದೆಯಲ್ಲವೆ. ನಿಮಿತ್ತರಾಗುವ ಭಾಗ್ಯ ಇದರ ಮಹತ್ತಿಕೆ ಈಗ ಕೆಲಕೆಲವೊಮ್ಮೆ ಸಾಧಾರಣ ಎನಿಸಲೂಬಹುದು ಆದರೆ ಈ ಭಾಗ್ಯವನ್ನು ಮುಂದೊಂದು ಸಮಯದಲ್ಲಿ ಅತೀ ಶ್ರೇಷ್ಠವೆಂಬ ಅನುಭವ ಮಾಡುತ್ತೀರಿ. ಯಾರು ನಿಮಿತ್ತರನ್ನಾಗಿ ಮಾಡಿದರು? ಯಾರು ನಾನಾತ್ಮನನ್ನು ಈ ಸೇವೆಗಾಗಿ ಆಯ್ಕೆ ಮಾಡಿಕೊಂಡರು? ಎಂಬ ಸ್ಮೃತಿಯಲ್ಲಿದ್ದರೆ ಬಹಳ ಸಹಜವಾಗಿ ನಿರಂತರ ಯೋಗಿ ಆಗುತ್ತೀರಿ ಸದಾ ಮನಸ್ಸಿನಲ್ಲಿ ತಯಾರು ಮಾಡುವ ತಂದೆಯ ಗುಣಗಳನ್ನು ಹಾಡುತ್ತಾ ಇದ್ದರೆ ನಿರಂತರ ಯೋಗಿಯಾಗುತ್ತೀರಿ. ಇದು ಕಡಿಮೆ ಮಾತಲ್ಲ. ಇದು ವಿಶ್ವದ ಕೋಟಿಯಲ್ಲಿಯೂ ಕೆಲವರೇ ಅತ್ಮರಲ್ಲಿಯೂ ಎಷ್ಟು ಕಡಿಮೆ ಜನ ನಿಮಿತ್ತ ಶಿಕ್ಷಕಿಯರಾಗಿದ್ದೀರಿ! ಬ್ರಾಹ್ಮಣ ಪರಿವಾರದಲ್ಲಿಯೂ ಶಿಕ್ಷಕಿಯರು ಎಷ್ಟು ಜನರಿದ್ದಾರೆ ಅಂದಮೇಲೆ ಕೆಲವರಲ್ಲಿಯೂ ಕೆಲವರಾದರಲ್ಲವೆ. ಟೀಚರ್ ಅರ್ಥಾತ್ ಸದಾ ಭಾಗ್ಯವಂತ ಮತ್ತು ಭಾಗ್ಯದ ಗೀತೆಯನ್ನು ಹಾಡುತ್ತಿರುವವರು. ಬಾಪ್‌ದಾದಾರವರಿಗೆ ನಿಮಿತ್ತ ಶಿಕ್ಷಕಿಯರ ಪ್ರತಿ ಹೆಮ್ಮೆಯಿರುತ್ತದೆ ಆದರೆ ರಾಜಯುಕ್ತ ಶಿಕ್ಷಕಿಯರ ಹೆಮ್ಮೆಯಿರುತ್ತದೆ. ಒಳ್ಳೆಯದು-

ಪ್ರವೃತ್ತಿಯವರೂ ಸಹ ಆನಂದವಾಗಿ ಇರುತ್ತೀರಲ್ಲವೆ. ಗೊಂದಲದಲ್ಲಿ ಇರುವಿರೋ ಅಥವಾ ಮಜಾವಾಗಿರುವವರೋ? ಬ್ರಾಹ್ಮಣ ಜೀವನದಲ್ಲಿ ಪ್ರತೀ ಸೆಕೆಂಡ್ ತನು-ಮನ-ಧನ, ಜನದ ಮಜವೇ ಮಜವಿದೆ, ಆರಾಮದಿಂದ ಮಲಗುತ್ತೀರಿ, ಆರಾಮದಿಂದ ತಿನ್ನುತ್ತೀರಿ. ಆರಾಮವಾಗಿ ಇರಿ. ತಿನ್ನಿರಿ, ಮಲಗಿರಿ ಮತ್ತು ಓದಿರಿ. ಇನ್ನೇನಾದರೂ ಬೇಕಾಗಿದೆಯೇ? ಓದುವುದು ಸರಿಯಾಗಿದೆಯೋ ಅಥವಾ ಅಮೃತವೇಳೆ ಮಲಗಿಬಿಡುತ್ತೀರೋ? ಕೆಲವು ಮಕ್ಕಳು ಹೀಗೆ ಮಾಡುತ್ತಾರೆ ಮತ್ತೆ ಹೇಳುತ್ತಾರೆ- ಇಡೀ ರಾತ್ರಿ ಎಚ್ಚರವಾಗಿದ್ದೆವು ಆದ್ದರಿಂದ ಅಮೃತವೇಳೆ ನಿದ್ರೆ ಬಂದುಬಿಟ್ಟಿತು. ಒಂದು ಸೇವೆ ಮಾಡಿಬಿಟ್ಟರೆ ಅಮೃತವೇಳೆಯನ್ನು ಬಿಟ್ಟುಬಿಡುವಿರಾ? ಇದರಿಂದ ಜಮಾ ಏನಾಯಿತು? ಹೆಚ್ಚಿನ ಜಮಾ ಆಗಲಿಲ್ಲ. ಒಂದುಕಡೆ ಸೇವೆ ಮಾಡಿದಿರಿ ಇನ್ನೊಂದುಕಡೆ ಅಮೃತವೇಳೆಯನ್ನು ತಪ್ಪಿಸಿದಿರಿ ಅಂದಮೇಲೆ ಏನಾಯಿತು? ಆದರೆ ನೇಮಿನಾಥರಂತೆ ಕೇವಲ ತೂಕಡಿಸುತ್ತಾ ಕುಳಿತುಕೊಳ್ಳಬಾರದು. ಅಮೃತವೇಳೆಯ ಟಿ.ವಿ. ಬಹಳ ಚೆನ್ನಾಗಿರುತ್ತದೆ. ಹೇಗೆ ಅವರು ಯೋಗಾಸನಗಳನ್ನು ಮಾಡುತ್ತಾರಲ್ಲವೆ, ಅನೇಕ ಪ್ರಕಾರದ ಭಂಗಿಗಳನ್ನು ಬದಲಾಯಿಸುತ್ತಾ ಇರುತ್ತಾರೆ ಹಾಗೆಯೇ ಇಲ್ಲಿಯೂ ಮಾಡುತ್ತಿರುತ್ತಾರೆ. ಇದು ಸಹಜಯೋಗವಲ್ಲವೆ ಎಂದು ತಿಳಿದು ಅಮೃತವೇಳೆ ಆರಾಮದಿಂದ ಕುಳಿತುಕೊಳ್ಳುತ್ತಾರೆ. ಕೆಲವರ ಸಂಗೀತ (ಗೊರಕೆ) ವಂತೂ ಬಾಪ್‌ದಾದಾರವರ ಬಳಿ ಬಹಳ ಚೆನ್ನಾಗಿ ಕೇಳಿಬರುತ್ತದೆ. ಬಾಪ್‌ದಾದಾರವರ ಬಳಿ ಅದರದೂ ಕ್ಯಾಸೆಟ್ ಇದೆ. ಆದ್ದರಿಂದ ಈಗ ಡಬಲ್ ಅಂಡರ್‌ಲೈನ್ ಮಾಡಿಕೊಳ್ಳುತ್ತೀರಲ್ಲವೆ. ನಂತರ ಫಲಿತಾಂಶದಲ್ಲಿ ಎಷ್ಟು ಅಂತರವಾಯಿತು ಎಂಬುದನ್ನು ತಿಳಿಸುತ್ತೇವೆ. ಒಳ್ಳೆಯದು-

**ನಾಲ್ಕಾರು ಕಡೆಯ ಶ್ರೇಷ್ಠಲಕ್ಷ್ಯ ಮತ್ತು ಶ್ರೇಷ್ಠ ಲಕ್ಷಣಗಳನ್ನು ಧಾರಣೆ ಮಾಡಿಕೊಳ್ಳುವಂತಹ ತೀವ್ರಪುರುಷಾರ್ಥಿ ಆತ್ಮರಿಗೆ, ಸದಾ ತಮ್ಮ ಮಾತನ್ನು ಸಮಯ ಮತ್ತು ಸಂಯಮದಲ್ಲಿ ಇಟ್ಟುಕೊಳ್ಳುವಂತಹ ಪುರುಷೋತ್ತಮ ಆತ್ಮರಿಗೆ, ಸದಾ ಮಹಾವೀರರಾಗಿ ಮಾಯೆಯ ಸರ್ವರೂಪಗಳನ್ನು ಅರಿತುಕೊಳ್ಳುವಂತಹ ಜ್ಞಾನಪೂರ್ಣ ಆತ್ಮರಿಗೆ, ಸದಾ ಪ್ರತೀ ಸೆಕೆಂಡ್ ಮೋಜಿನಲ್ಲಿ ಇರುವಂತಹ ನಿಶ್ಚಿಂತ ಚಕ್ರವರ್ತಿಗಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಅವ್ಯಕ್ತ ಬಾಪ್‌ದಾದಾರವರು ಪಾರ್ಟಿಯೊಂದಿಗೆ ವಾರ್ತಾಲಾಪ:**

ಶಾಂತಿಯ ಶಕ್ತಿಯನ್ನು ಬಹಳ ಚೆನ್ನಾಗಿ ತಿಳಿದಿದ್ದೀರಾ ಶಾಂತಿಯ ಶಕ್ತಿಯು ಸೆಕೆಂಡಿನಲ್ಲಿ ತಮ್ಮ ಶಾಂತಿಧಾಮಕ್ಕೆ ತಲುಪಿಸಿಬಿಡುತ್ತದೆ. ವಿಜ್ಞಾನಿಗಳಂತು ಬಹಳ ತೀವ್ರಗತಿಯಿರುವ ಯಂತ್ರಗಳನ್ನು ತಯಾರು ಮಾಡುವ ಪ್ರಯತ್ನದಲ್ಲಿರುತ್ತಾರೆ. ಆದರೆ ತಮ್ಮ ಯಂತ್ರವೆಷ್ಟು ತೀವ್ರಗತಿಯದಾಗಿದೆ! ಯೋಚಿಸಿದಿರಿ ಮತ್ತು ತಲುಪಿದಿರಿ! ಇಂತಹ ಯಂತ್ರವು ವಿಜ್ಞಾನದಲ್ಲಿದೆಯೇ, ಯಾವುದು ಇಷ್ಟೂ ದೂರಕ್ಕೆ

ಖರ್ಚಿಲ್ಲದೆಯೇ ತಲುಪಿಬಿಡುತ್ತದೆ? ಅವರಂತು ಒಂದೊಂದು ಯಂತ್ರವನ್ನು ತಯಾರು ಮಾಡುವುದರಲ್ಲಿ ಎಷ್ಟೊಂದು ಖರ್ಚು ಮಾಡುತ್ತಾರೆ. ಎಷ್ಟೊಂದು ಸಮಯವನ್ನು ಮತ್ತು ಎಷ್ಟೊಂದು ಶಕ್ತಿಯನ್ನು ಉಪಯೋಗಿಸುತ್ತಾರೆ. ತಾವೇನು ಮಾಡುವಿರಿ? ಖರ್ಚಿಲ್ಲದೆಯೇ ಸಿಕ್ಕಿಬಿಟ್ಟಿದೆ. ಈ ಸಂಕಲ್ಪದ ಶಕ್ತಿಯು ಅತ್ಯಂತ ವೇಗದ್ದಾಗಿದೆ. ತಮಗೆ ಶುಭಸಂಕಲ್ಪದ ಯಂತ್ರವು ಸಿಕ್ಕಿದೆ, ದಿವ್ಯಬುದ್ಧಿ ಸಿಕ್ಕಿದೆ. ಶುದ್ಧ ಮನಸ್ಸು ಹಾಗೂ ದಿವ್ಯಬುದ್ಧಿಯಿಂದ ತಲುಪಿಬಿಡುತ್ತೀರಿ. ಯಾವಾಗ ಬೇಕೋ ಆಗ ಹಿಂತಿರುಗಿ ಬನ್ನಿರಿ, ಯಾವಾಗ ಬೇಕೋ ಆಗ ಹೊರಟುಬಿಡಿ, ವಿಜ್ಞಾನಿಗಳಾದರೂ ಋತುವನ್ನು ನೋಡಬೇಕಾಗುವುದು. ತಾವಂತು ಇದ್ಯಾವುದನ್ನೂ ನೋಡಬೇಕಾಗುವುದಿಲ್ಲ- ಇಂದು ಮೋಡಗಳಿವೆಯೇ, ಹೋಗಲು ಸಾಧ್ಯವಿಲ್ಲವೇ! ವರ್ತಮಾನದಲ್ಲಿ ನೋಡಿ- ಮೋಡಗಳಷ್ಟೆ ಅಲ್ಲ, ಸ್ವಲ್ಪ ಮಂಜಿದ್ದರೂ ವಿಮಾನವು ಹಾರುವುದಕ್ಕಾಗುವುದಿಲ್ಲ ಮತ್ತು ತಮ್ಮ ವಿಮಾನವು ಎವರೆಡಿ ಆಗಿದೆಯೇ ಅಥವಾ ಕೆಲವೊಮ್ಮೆ ಮಂಜು ಆವರಿಸುತ್ತದೆಯೇ? ಎವರೆಡಿ ಇದೆಯೇ? ಸೆಕೆಂಡಿನಲ್ಲಿ ಹೋಗಲು ಸಾಧ್ಯವಾಗುವಷ್ಟು ತೀವ್ರಗತಿಯಿಂದ ಕೂಡಿದೆಯೇ? ಮಾಯೆಯೇನಾದರೂ ಅಡಚಣೆ ಹಾಕುವುದಿಲ್ಲವೇ? ಮಾಸ್ಟರ್ ಸರ್ವಶಕ್ತಿವಂತನನ್ನು ಯಾರೂ ಅಡ್ಡಿ ಮಾಡಲು ಸಾಧ್ಯವಿಲ್ಲ. ಎಲ್ಲಿ ಸರ್ವ ಶಕ್ತಿಗಳವೆಯೋ ಅಲ್ಲಿ ಯಾರು ತಡೆಯುವರು! ಯಾವುದೇ ಶಕ್ತಿಯ ಕೊರತೆಯಿದ್ದರೆ ಸಮಯದಲ್ಲಿ ಮೋಸವುಂಟಾವುದು. ತಮ್ಮಲ್ಲಿ ಸಹನ ಶಕ್ತಿ ಇದೆ, ನಿರ್ಣಯ ಶಕ್ತಿಯಲ್ಲಿ ಕೊರತೆಯಿದೆ ಎಂದು ತಿಳಿದುಕೊಳ್ಳಿರಿ, ಕೆಲವೊಮ್ಮೆ ಅಂತಹ ಪರಿಸ್ಥಿತಿಯು ಬರುತ್ತದೆ, ಅದರಲ್ಲಿ ನಿರ್ಣಯ ಮಾಡಬೇಕಾಗುತ್ತದೆ. ಆ ಸಮಯದಲ್ಲಿ ನಷ್ಟವಾಗಿಬಿಡುತ್ತದೆ. ಆ ಸಮಯದಲ್ಲಿ ಒಂದು ಕ್ಷಣದಲ್ಲಿ. ಆಯಿತು ಅಥವಾ ಇಲ್ಲ ಎನ್ನುವ ನಿರ್ಣಯ ತೆಗೆದುಕೊಳ್ಳಬೇಕಾಗುವುದು, ಆದರೆ ಅದರ ಪರಿಣಾಮ ಎಷ್ಟು ದೊಡ್ಡದಾಗಿರುತ್ತದೆ! ಅಂದಮೇಲೆ ತಮ್ಮಬಳಿಯಿರುವ ಎಲ್ಲಾ ಶಕ್ತಿಗಳನ್ನು ಪರಿಶೀಲನೆ ಮಾಡಿರಿ. ಎಲ್ಲವೂ ಸರಿಯಿದೆ, ಸರಿಯಾಗಿ ನಡೆಯುತ್ತಿದೆ, ಯೋಗವನ್ನಂತು ಮಾಡುತ್ತಿದ್ದೇವೆ. ಈ ರೀತಿಯಲ್ಲ ಆದರೆ ಯೋಗದಿಂದ ಯಾವ ಪ್ರಾಪ್ತಿಗಳಾಗುತ್ತವೆಯೋ ಅವೆಲ್ಲವೂ ಇದೆಯೇ? ಅಥವಾ ಸ್ವಲ್ಪದರಲ್ಲಿಯೇ ಅಂದರೆ ತಂದೆಯಂತು ನಮ್ಮವರಾಗಿಬಿಟ್ಟರು ಎಂದು ಖುಷಿಯಾಗಿದ್ದೀರಾ? ತಂದೆಯಂತು ತಮ್ಮವರಾಗಿದ್ದಾರೆ ಆದರೆ ಆಸ್ತಿಯೂ ತಮ್ಮದಾಗಿದೆಯೇ ಅಥವಾ ಕೇವಲ ತಂದೆಯನ್ನು ಪಡೆದಿರುವುದಷ್ಟೇ ಸರಿಯೇ? ಆಸ್ತಿಯ ಮಾಲೀಕರಾಗಬೇಕಲ್ಲವೇ? ತಂದೆಯ ಆಸ್ತಿಯು ಸರ್ವಶಕ್ತಿಗಳಾಗಿವೆ ಆದ್ದರಿಂದ ತಂದೆಯ ಮಹಿಮೆಯಲ್ಲಿ ಸರ್ವಶಕ್ತಿವಂತ ಆಲ್ ಮೈಟಿ ಅಥಾರಿಟಿ ಎನ್ನುವುದಿದೆ. ಸರ್ವಶಕ್ತಿಗಳ ಜಮಾ ಇದೆಯೇ? ಅಥವಾ ಸಂಪಾದಿಸಿದೆನು ಮತ್ತು ತಿಂದೆನು ಎನ್ನುವಷ್ಟಿದೆಯೇ! ಬಾಪ್‌ದಾದಾರವರು ತಿಳಿಸಿದ್ದಾರೆ- ಮುಂದೆ ನಡೆದಂತೆ ತಾವು ಮಾಸ್ಟರ್ ಸರ್ವಶಕ್ತಿವಂತರ ಬಳಿ ಎಲ್ಲಾ ಬಿಕಾರಿಗಳಾಗಿ ಬರುತ್ತಾರೆ. ಹಣ ಅಥವಾ ಆಹಾರದ ಬಿಕಾರಿಗಳಲ್ಲ ಆದರೆ ಶಕ್ತಿಗಳ ಬಿಕಾರಿಗಳು ಬರುವರು. ಅಂದಮೇಲೆ ತಮ್ಮಬಳಿ ಅದರ ಜಮಾ ಆಗಿದ್ದರೆ ಕೊಡುವರಲ್ಲವೆ! ಯಾರ ಬಳಿ ತನಗಿಂತಲೂ ಹೆಚ್ಚಾಗಿ ಇರುತ್ತದೆಯೋ ಅವರೇ ದಾನ ಕೊಡಲು ಸಾಧ್ಯ. ಒಂದುವೇಳೆ ತನಗೆಷ್ಟು ಬೇಕಾಗಿದೆಯೋ ಅಷ್ಟಿದ್ದರೆ ದಾನವನ್ನೇನು ಕೊಡುವರು? ಅಂದಮೇಲೆ ದಾನ ಕೊಡುವಷ್ಟು ಜಮಾ ಮಾಡಿರಿ. ಸಂಗಮದಲ್ಲಿ ಮತ್ತೇನು ಕಾರ್ಯವಿದೆ? ಜಮಾ ಮಾಡುವುದೇ ಕಾರ್ಯ ಸಿಕ್ಕಿದೆ. ಇಡೀ ಕಲ್ಪದಲ್ಲಿ ಮತ್ತಾವುದೇ ಯುಗದಲ್ಲಿಯೂ ಈ ಜಮಾ ಮಾಡಲು ಸಾಧ್ಯವಿಲ್ಲ. ನಂತರದಲ್ಲಂತು ಖರ್ಚು ಮಾಡಬೇಕಾಗುತ್ತದೆ. ಜಮಾ ಮಾಡಿಕೊಳ್ಳಲು ಸಾಧ್ಯವಿಲ್ಲ. ಅಂದಮೇಲೆ ಜಮಾ ಮಾಡುವ ಸಮಯದಲ್ಲೇನಾದರೂ ಜಮಾ ಮಾಡದಿದ್ದರೆ, ಅಂತ್ಯದಲ್ಲೇನು ಹೇಳಬೇಕಾಗುತ್ತದೆ? "ಈಗಿಲ್ಲದಿದ್ದರೆ ಮತ್ತೆಂದಿಗೂ ಇಲ್ಲ" ನಂತರದಲ್ಲಂತು ಟೂಲೇಟ್ ಬೋರ್ಡ್ ಹಾಕಲಾಗುತ್ತದೆ. ಈಗಂತು ಲೇಟ್ ಬೋರ್ಡ್ ಇದೆ, ಟೂಲೇಟ್ ಇಲ್ಲ. ಮಾತೆಯರೆಲ್ಲರೂ ಇಷ್ಟು ಜಮಾ ಮಾಡಿಟ್ಟಿದ್ದೀರಾ? ಶಿವಶಕ್ತಿ ಆಗಿದ್ದೀರಾ ಅಥವಾ ಮನೆಯ ಮಾತೆಯಾಗಿದ್ದೀರಾ? ಶಿವಶಕ್ತಿ ಎಂದು ಹೇಳುವುದರಿಂದ ಶಕ್ತಿಗಳ ನೆನಪು ಬರುತ್ತದೆ. ಅಂತಹ ಮಾತೆಯರನ್ನು ತಂದೆಯು ಶಿವಶಕ್ತಿಯನ್ನಾಗಿ ಮಾಡಿಬಿಟ್ಟರು! ಒಂದುವೇಳೆ ಯಾರಾದರೂ ಮುಖ ನೋಡಲು ಬಂದರೆ ಏನು ಹೇಳುವಿರಿ? ಇಂತಹ ಶಿವಶಕ್ತಿಯಿದ್ದಾರೆಯೇ? ಆದರೆ ತಂದೆಯು ಯಾವ ಆತ್ಮರನ್ನು ಗುರುತಿಸಿದ್ದಾರೆಯೋ ಅವರು ಶಕ್ತಿಶಾಲಿಗಳು. ತಂದೆಯನ್ನು ಆತ್ಮರನ್ನು ನೋಡುತ್ತಾರೆ. ವೃದ್ಧರನ್ನಲ್ಲ. ಯುವಕರನ್ನೂ ನೋಡುವುದಿಲ್ಲ, ಮಕ್ಕಳನ್ನೂ ನೋಡುವುದಿಲ್ಲ. ಆತ್ಮವಂತು ವೃದ್ಧ ಅಥವಾ ಚಿಕ್ಕದಾಗುವುದಿಲ್ಲ. ಅಂದಮೇಲೆ ನಮ್ಮನ್ನು ಬಾಬಾರವರು ಶಿವಶಕ್ತಿಯನ್ನಾಗಿ ಮಾಡಿಬಿಟ್ಟರೆಂಬ ಖುಷಿಯಿದೆಯಲ್ಲವೆ!

ಪ್ರಪಂಚದಲ್ಲಿ ಯಾರೆಷ್ಟಾದರೂ ವಿದ್ಯಾವಂತ ಮಾತೆಯರಿರಬಹುದು ಆದರೆ ತಂದೆಯವರಿಗೆ ಹಳ್ಳಿಯವರೇ ಪ್ರಿಯರಾಗಿದ್ದಾರೆ, ಏಕೆ?"ಸತ್ಯ ಹೃದಯದವರ ಮೇಲೆ ಪ್ರಭು ಪ್ರಸನ್ನವಾಗುವರು". ತಂದೆಗೆ ಸತ್ಯ ಹೃದಯವು ಪ್ರಿಯವೆಸುತ್ತದೆ. ಯಾರು ಮುಗ್ಧರಾಗಿರುತ್ತಾರೆಯೋ ಅವರಿಗೆ ಸುಳ್ಳು-ಕಪಟ ಮಾಡುವುದೇ ಬರುವುದಿಲ್ಲ. ಯಾರು ಚಾಲಾಕಿ, ಚತುರರಾಗಿರುತ್ತಾರೆಯೋ ಅವರಲ್ಲಿ ಇವೆಲ್ಲಾ ಮಾತುಗಳಿರುತ್ತವೆ. ಅಂದಮೇಲೆ ಯಾರ ಹೃದಯ ಮುಗ್ಧವಾಗಿರುತ್ತದೆಯೋ ಅರ್ಥಾತ್ ಪ್ರಪಂಚದ ಮಾಯಾವಿ ಚತುರತೆಯಿಂದ ದೂರವಿರುತ್ತಾರೆಯೋ ಅವರೇ ತಂದೆಯವರೆಗೆ ಅತಿಪ್ರಿಯವಾಗಿದ್ದಾರೆ. ತಂದೆಯು ಸತ್ಯ ಹೃದಯವನ್ನು ನೋಡುತ್ತಾರೆ. ಉಳಿದಂತೆ ವಿದ್ಯೆಯನ್ನಾಗಲಿ, ಮುಖವನ್ನಾಗಲಿ, ಹಳ್ಳಿಯನ್ನಾಗಲಿ, ಹಣವನ್ನಾಗಲಿ ನೋಡುವುದಿಲ್ಲ. ಸತ್ಯ ಹೃದಯವಿರಬೇಕು ಆದ್ದರಿಂದ ತಂದೆಯ ಹೆಸರು 'ಹೃದಯರಾಮ' ಎನ್ನುವುದಿದೆ. ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-01-1990.

***ಪುರುಷಾರ್ಥದ ತೀವ್ರಗತಿಯ ಕೊರತೆಗೆ ಎರಡು ಮುಖ್ಯ ಕಾರಣಗಳು***

ತೀವ್ರ ಪುರುಷಾರ್ಥಿ ಅರ್ಥಾಥ್ ಮೊದಲ ಡಿವಿಜನ್ ನಲ್ಲಿ ಬರುವವರು ಮತ್ತು ಪುರುಷಾರ್ಥಿ ಎಂದರೆ ಎರಡನೇ ಡಿವಿಷನ್ ನಲ್ಲಿ ತೇರ್ಗಡೆಯಾಗುವವರು. ಎಲ್ಲರಿಗೂ ಮೊದಲ ಡಿವಿಜನ್ ನಲ್ಲಿ ಬರಬೇಕೆಂಬ ಇಚ್ಛೆ ಇದೆ ಆದರೆ "ಲಕ್ಷ್ಯ ಮತ್ತು ಲಕ್ಷಣಗಳು ಎರಡರಲ್ಲಿ ಅಂತರ ಬರುತ್ತಿದೆ". ಎಂದು ಹೇಳುತ್ತಾ ಶಿವಪರಮಾತ್ಮ ತಿಳಿಸಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಅನಾದಿ ಆದಿ ರಚಯಿತನಾದ ಬಾಪ್‌ದಾದಾ ವಿಶೇಷವಾಗಿ ತನ್ನ ಡೈರೆಕ್ಟ್, ಸಮೀಪ, ಶ್ರೇಷ್ಠ ರಚನೆಯಾದ ಬ್ರಾಹ್ಮಣ ಆತ್ಮನೆಂದು ನನ್ನನ್ನು ನೋಡುತ್ತಿದ್ದಾರೆ.

2. ನಾನು ಬಾಪ್‌ದಾದಾ ರವರಿಂದ ಲಭಿಸಿರುವ ಶ್ರೇಷ್ಠ ಸಹಜ ವಿಧಿಯಿಂದ ಪುರುಷಾರ್ಥದಲ್ಲಿ ಸದಾ ತೀವ್ರ ವೇಗದಿಂದ ಮುಂದಕ್ಕೆ ಹೋಗುತ್ತಿದ್ದೇನೆ.

3. ಎಲ್ಲದಕ್ಕಿಂತಲೂ ಶ್ರೇಷ್ಠ ಶಕ್ತಿಯಾದ ಸಂಕಲ್ಪ ಶಕ್ತಿಯನ್ನು ನಾನು ಸ್ವಯಂನ ಪ್ರತಿ, ಸೇವೆಯ ಪ್ರತಿ, ಯಥಾರ್ಥವಾಗಿ ಸಮಯ ಪ್ರಮಾಣ ಕಾರ್ಯದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದೇನೆ.

4. ನಾನು ವಾಚಾ ಶಕ್ತಿಯನ್ನು ಯಥಾರ್ಥ ಮತ್ತು ಸಮರ್ಥ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದೇನೆ.

5. ಬಾಪ್‌ದಾದಾ ತಿಳಿಸಿರುವ ಹಾಗೆ ವಿಶೇಷವಾಗಿ ಪುರುಷಾರ್ಥದಲ್ಲಿ, ಸೇವೆಯಲ್ಲಿ ಮುಂದಕ್ಕೆ ಹೋಗಲು ನಾನು ಕಡಿಮೆ, ನಿಧಾನವಾಗಿ ಮತ್ತು ಮಧುರವಾಗಿ ಮಾತನಾಡುತ್ತಿದ್ದೇನೆ.

6. ನಾನು ಮಾಯೆ ಬರುತ್ತದೆ ಎಂಬುದರೊಂದಿಗೆ ನಾನು ಮಾಯಾಜಿತ್ ಸ್ವರೂಪ ಎಂದು ಕೂಡ ನೆನಪಿಟ್ಟಿದ್ದೇನೆ.

7. ನಾನು ನನ್ನ ಮಾತುಗಳನ್ನು ಸಮಯ ಪ್ರಮಾಣ ಉಪಯೋಗಿಸುವ ಮರ್ಯಾದಾ ಪುರುಷೋತ್ತಮನು.

8. ಮಾಸ್ಟರ್ ಸದ್ಗುರುವಾದ ನನ್ನ ಮಾತುಗಳು ಮಹಾವಾಕ್ಯಗಳಂತೆ ಇವೆ.

9. ನಾನು ನನ್ನ ಮಾತಿನಿಂದ ಶಕ್ತಿಯನ್ನು ಮತ್ತು ಸಮಯವನ್ನು ಎಷ್ಟು ಜಮಾ ಮಾಡಿಕೊಂಡಿದ್ದೇನೆ ಎಷ್ಟು ಖರ್ಚು ಮಾಡಿಕೊಂಡಿದ್ದೇನೆ ಎಂದು ಪರಿಶೀಲಿಸಿಕೊಳ್ಳುತ್ತಾ ಅಂತರ್ಮುಖತೆಯ ರಸವನ್ನು ಅನುಭವ ಮಾಡಿಕೊಂಡಿದ್ದೇನೆ.

10. ಅಂತರ್ಮುಖಿಯಾದ ನಾನು ಸದಾ ಭೃಕುಟಿ ಎಂಬ ಕುಟೀರದಲ್ಲಿ ನನ್ನನ್ನು ನಾನು ತಪಸ್ವಿ ಮೂರ್ತಿ ಎಂಬ ಅನುಭವ ಮಾಡಿಕೊಂಡಿದ್ದೇನೆ.

11. ನನ್ನನ್ನು ನಿಮಿತ್ತವಾಗಿ, ಯೋಗ್ಯವಾಗಿ ತಯಾರು ಮಾಡಿರುವ ತಂದೆಯ ಸ್ಮೃತಿಯಲ್ಲಿ ಸಹಜವಾಗಿ ಇರುವ ನಾನು ನಿರಂತರ ಯೋಗಿ.